ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಪತ್ರಿಕಾ ಪ್ರಕಟಣೆ/2022 ದಿನಾಂಕ: 08-10-2022

# ಪತ್ರಿಕಾ ಪ್ರಕಟಣೆ

## 2022 ರ ಡಿಪ್ಲೊಮಾ ಸಿಇಟಿ – ಅರ್ಜಿ ಸಲ್ಲಿಸಲು ದಿನಾಂಕ ವಿಸ್ತರಣೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು, 2022ನೇ ಸಾಲಿನ ಎರಡನೇ ವರ್ಷದ / ಮೂರನೇ ಸೆಮಿಸ್ಟರ್ ನ ಹಗಲು ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕಾಗಿ ಅರ್ಹ ಡಿಪ್ಲೊಮ ಅಭ್ಯರ್ಥಿಗಳಿಂದ 27-09-2022 ರಿಂದ 07-10-2022ರ ವರೆಗೆ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿತ್ತು.

ಸರ್ಕಾರದ ನಿರ್ದೇಶನದಂತೆ ಡಿಪ್ಲೊಮ ಇನ್ ಲೆದರ್ & ಫ್ಯಾಶನ್ ಟೆಕ್ನಾಲಜಿ ಮತ್ತು ಡಿಪ್ಲೊಮ ಇನ್ ಪ್ರಿಂಟಿಂಗ್ ಟೆಕ್ನಾಲಜಿ ಕೋರ್ಸುಗಳಲ್ಲಿ ಡಿಪ್ಲೊಮ ಪಡೆದಿರುವ ಅಭ್ಯರ್ಥಿಗಳನ್ನು ಪರಿಗಣಿಸಬೇಕಾಗಿರು ವುದರಿಂದ, ಅಂತಹ ಅಭ್ಯರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ದಿನಾಂಕ 09-10-2022 ರಿಂದ 13-10-2022 ರಾತ್ರಿ 11.59 ರ ವರೆಗೆ ಡಿಸಿಇಟಿ-2022ಕ್ಕೆ ಅರ್ಜಿಯನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ.

ಇಲ್ಲಿಯವರೆಗೆ ಡಿಸಿಇಟಿ-2022ಕ್ಕೆ ಅರ್ಜಿ ಸಲ್ಲಿಸದೆ ಇರುವ ಅಭ್ಯರ್ಥಿಗಳು, ಅರ್ಜಿ ಸಲ್ಲಿಸಿ ಘೋಷಣೆ ಮಾಡದಿರುವ ಅಭ್ಯರ್ಥಿಗಳು ಹಾಗು ಕೇವಲ ಶುಲ್ಕ ಪಾವತಿಸಿ ಸಂಪೂರ್ಣವಾಗಿ ಅರ್ಜಿಯನ್ನು ಸಲ್ಲಿಸದೆ ಇರುವ ಅಭ್ಯರ್ಥಿಗಳೂ ಸಹ ದಿನಾಂಕ 09-10-2022 ರಿಂದ 13-10-2022 ರಾತ್ರಿ 11.59 ರ ವರೆಗೆ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಿ ಘೋಷಣೆ ಮಾಡದಿರುವ ಅಥವಾ ಶುಲ್ಕ ಪಾವತಿಸಿ ಅರ್ಜಿಯನ್ನು ಸಂಪೂರ್ಣವಾಗಿ ಭರ್ತಿ ಮಾಡದೆ ಇರುವ ಅರ್ಜಿಗಳು ಮಾನ್ಯತೆ ಹೊಂದುವುದಿಲ್ಲ. ಸಂಪೂರ್ಣವಾಗಿ ಅರ್ಜಿ ಸಲ್ಲಿಸಿ ಘೋಷಣೆ ಮಾಡಿದಲ್ಲಿ ಮಾತ್ರ ಅರ್ಜಿಗಳು ಪುರಸ್ಕೃತವಾಗುತ್ತದೆ.

ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಅನ್ನು ನೋಡಲು ಕೋರಿದೆ.

ಸಹಿ/-
ಕಾರ್ಯನಿರ್ವಾಹಕ ನಿರ್ದೇಶಕರು

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru – 560 012.
Phone: 080-2356 4583, 2336 1786, Fax: 080-2346 1576
e-mail : keauthority-ka@nic.in Website : http://kea.kar.nic.in